ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:36:ಕ.ಅ.ಪ್ರಾ/2018-19/ವಿ.ವೇ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,

ಬೆಂಗಳೂರು,ದಿನಾಂಕ:29-07-2020.

## ಸುತ್ತೋಲೆ

ವಿಷಯ: 2020-21 ನೇ ಸಾಲಿನಿಂದ ಐಚ್ಚಿಕ ಭಾಷಾ ವಿದ್ಯಾರ್ಥಿವೇತನದ ಮಂಜೂರಾತಿಯನ್ನು ಮುಕ್ತಾಯಗೊಳಿಸಿರುವ ಬಗ್ಗೆ

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ:ಇಡಿ:06:ಹೆಚ್.ಪಿ.ಸಿ:2017,ದಿ:02-03-2020,

2) ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 533 ವೆಚ್ಚ-8/2019 ದಿನಾಂಕ:25.02.2020.

***************

ಸೂಚಿತ ವಿಷಯಕ್ಕೆ ಸಂಬಂದಿಸಿದಂತೆ, ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪದವಿ ತರಗತಿಯಲ್ಲಿ ಕನ್ನಡ,ಸಂಸ್ಕೃತ, ಮತ್ತು ಆಂಗ್ಲ ಭಾಷೆಯನ್ನು ಐಚ್ಚಿಕವಾಗಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ಐಚ್ಚಿಕ ಭಾಷಾ ವಿದ್ಯಾರ್ಥಿವೇತನದ ಮಂಜೂರಾತಿ ಯೋಜನೆಯನ್ನು ಉಲ್ಲೇಖ(2) ರ ಆರ್ಥಿಕ ಇಲಾಖೆಯ ಟಿಪ್ಪಣಿಯನ್ನು ಉಲ್ಲೇಖ(1) ರ ಪತ್ರದಲ್ಲಿ ಉಲ್ಲೇಖಿಸಿ ಸರ್ಕಾರವು 2020-21 ನೇ ಸಾಲಿನಿಂದ ಮುಕ್ತಾಯಗೊಳಿಸಲು ನಿರ್ದೇಶಿಸಿದ್ದು ಅದರಂತೆ, 2020-21 ನೇ ಸಾಲಿನಿಂದ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪದವಿ ತರಗತಿಯಲ್ಲಿ ಕನ್ನಡ,ಸಂಸ್ಕೃತ, ಮತ್ತು ಆಂಗ್ಲ ಭಾಷೆಯನ್ನು ಐಚ್ಚಿಕವಾಗಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ಐಚ್ಚಿಕ ಭಾಷಾ ವಿದ್ಯಾರ್ಥಿವೇತನದ ಮಂಜೂರಾತಿ ಯೋಜನೆಯನ್ನು ಮುಕ್ತಾಯಗೊಳಿಸಲಾಗಿದೆ ಎಂದು ಈ ಮೂಲಕ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು,

**ಇವರಿಗೆ :**

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ, ಕಲಬುರ್ಗಿ.

**ಪ್ರತಿಯನ್ನು :**

1. ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳ ಮಾಹಿತಿಗಾಗಿ– ವೆಬ್‌ಸೈಟ್ ಮೂಲಕ

2. ಸುಗ್ರಿವ ಕಡತ